ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 1, July-August, 168-172
©*IIMRD*, Mysuru
IIMRD JOURNALS
www.iimrd.com

# ಸುಡುಗಾಡು ಸಿದ್ಧ ಸಮುದಾಯದ ಧರ್ಮ ಭಿಕ್ಷಾಟನೆ : ಒಂದು ಅಧ್ಯಯನ

ಪ್ರವೀಣ ಕುಮಾರ ಬಿ.*
*ಸಂಶೋಧನಾ ವಿದ್ಯಾರ್ಥಿ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ

***ಸಾರಾಂಶ* (Abstract)**

*ಪ್ರತಿಯೊಂದು ಸಮಾಜದಲ್ಲಿಯೂ ತಮ್ಮ ಬದುಕಿನ ವೈಶಿಷ್ಟ್ಯತೆಯ ಚರಿತ್ರೆಯ ಆಧಾರದ ಮೇಲೆ ಬದುಕನ್ನು ಕಟ್ಟಿಕೊಳ್ಳಲು ಹೊರಟಂತಹ ಅನೇಕ ಸಮುದಾಯಗಳಿವೆ. ಅಂತಹವುಗಳಲ್ಲಿ ಅಲೆಮಾರಿ, ಅರೆ–ಅಲೆಮಾರಿ, ಬುಡಕಟ್ಟು ಸಮುದಾಯಗಳು ಪ್ರಮುಖವಾದವು. ಈ ಸಮುದಾಯಗಳು ವಿಶೇಷವಾದ ಸಾಂಸ್ಕೃತಿಕ ನೆಲಗಟ್ಟನ್ನು ಕಟ್ಟಿಕೊಂಡಿದ್ದಾರೆ. ಅಂತಹ ಅನೇಕ ಸಮುದಾಯಗಳಲ್ಲಿ ಸುಡುಗಾಡು ಸಿದ್ಧ ಸಮುದಾಯವು ಕೂಡ ಒಂದಾಗಿದೆ.*

***ಮುಖ್ಯಪದಗಳು* (Keywords):** ಅಲೆಮಾರಿ, ಧರ್ಮ, ಬದುಕು, ಭಿಕ್ಷಾಟನೆ, ಸುಡುಗಾಡು ಸಿದ್ಧರು.

**ಪೀಠಿಕೆ**

ಅಲೆಮಾರಿ ಸಮುದಾಯಗಳಲ್ಲಿ ಒಂದಾದ ಸುಡುಗಾಡು ಸಿದ್ಧರು ತಮ್ಮ ವೃತ್ತಿಯಿಂದಲೇ ತುತ್ತು ಅನ್ನವನ್ನು ಕಂಡುಕೊಂಡವರು. ಶೈವ ಧರ್ಮದ ನೆರಳನ್ನು ಹಿಂಬಾಲಿಸಿದ ಇವರು ಸ್ವಲ್ಪಮಟ್ಟಿಗೆ ವೈಷ್ಣವ ಧರ್ಮದ ಬೆಳಕಿನೆಡೆಗೆ ಸಾಗಿದರು. ಪ್ರತಿಯೊಂದು ಸಮುದಾಯ ಅವರದೇ ಆದ ಧಾರ್ಮಿಕ, ಸಾಮಾಜಿಕ ಹಿನ್ನೆಲೆಯಲ್ಲಿ ಬದುಕು ಕಟ್ಟಿಕೊಂಡಿದ್ದಾರೆ. ಅಲೆಮಾರಿ ಸಮುದಾಯಗಳ ಬದುಕಿನ ಕಾಯಕದ ಸಂಗತಿಗಳನ್ನು ನೋಡಿದರೆ ಪ್ರತಿಯೊಂದು ಸಮುದಾಯ ಒಂದೊಂದು ದೈವಗಳಿಗೆ ಅಂಟಿಕೊಂಡು ಭಿಕ್ಷಾಟನೆ ಮಾಡುತ್ತಿರುವುದು ಕಂಡು ಬರುತ್ತದೆ. ಸುಡುಗಾಡು ಸಿದ್ಧರು ಕೂಡ ಇದೇ ವೃತ್ತಿಯನ್ನು ಅನುಸರಿಸಿಕೊಂಡು ಬಂದವರು ಎಂಬುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ.

ಸುಡುಗಾಡು ಸಿದ್ಧರು ಒಮ್ಮೆ ಭಿಕ್ಷಾಟನೆಗೆ ಹೊರಟರೆ ಹದಿನೈದು ದಿನಗಳ ಕಾಲ ಮೂರರಿಂದ ನಾಲ್ಕು ಜನರು ಹೊರಡುತ್ತಾರೆ. ಇವರು ಒಂದೂರಿನಿಂದ ಮತ್ತೊಂದು ಊರಿಗೆ ಸಂಚರಿಸಿ ಭಿಕ್ಷೆ ಬೇಡುತ್ತಾರೆ. ಸಣ್ಣ–ಸಣ್ಣ ಹಳ್ಳಿಗಳಾದರೆ ಒಂದೆ ದಿನಕ್ಕೆ ಭಿಕ್ಷಾಟನೆ ಮುಗಿಸಿ ಮುಂದಿನ ಊರಿಗೆ ಪ್ರಯಾಣೀಸುತ್ತಾರೆ. ಒಂದು ವೇಳೆ ದೊಡ್ಡ ದೊಡ್ಡ ಊರುಗಳಾದರೆ ಅದೇ ಗ್ರಾಮದಲ್ಲಿ ವಾಸ್ತವ್ಯ ಹೂಡುತ್ತಾರೆ. ಸುಡುಗಾಡು ಸಿದ್ಧರ ಧರ್ಮ ಭಿಕ್ಷಾಟನೆ ಎರಡು ರೀತಿಯ ಕಾಯಕಗಳ ಆಧಾರದ ಮೇಲೆ ಕವಲೊಡೆದಿದೆ. ಒಂದು ಸುಡುಗಾಡು ಸಿದ್ಧರ ಕಾಯಕ, ಎರಡನೇಯದ್ದು ನಿರಂಜನ ಕಾಯಕ. ಈ ಎರಡೂ ಕಾಯಕಗಳ ಮೂಲ ಧರ್ಮ ಭಿಕ್ಷಾಟನೆ ವ್ಯವಸ್ಥೆಯಿಂದಲೇ ಬದುಕು ಕಟ್ಟಿಕೊಳ್ಳುವಂತದ್ದು ಎಂಬುದಾಗಿ ವಕ್ತೃಗಳಿಂದ ತಿಳಿಯುತ್ತದೆ.

*Please cite this article as:* *ಪ್ರವೀಣ ಕುಮಾರ ಬಿ (2021*). ಸುಡುಗಾಡು ಸಿದ್ಧ ಸಮುದಾಯದ ಧರ್ಮ ಭಿಕ್ಷಾಟನೆ : ಒಂದು ಅಧ್ಯಯನ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(1). ಪು.ಸಂ. 168–172*

ಇವರು ಯಾವುದೇ ಗ್ರಾಮಕ್ಕೆ ಭಿಕ್ಷಾಟನೆಗೆ ಹೋದಾಗ ಮೊದಲು ಗ್ರಾಮದ ಮುಖಂಡರು ಅಥವಾ ಗೌಡರ ಅನುಮತಿಯನ್ನು ಪಡೆಯಬೇಕು. ಈ ರೀತಿ ಅನುಪತಿ ಪಡೆಯುವುದು ಮೊದಲಿನಿಂದಲೂ ರೂಢಿಗತವಾಗಿದೆ. ಹಿಂದೆ ಈ ಸಮುದಾಯದ ಬಗ್ಗೆ ಮೌಢ್ಯ ಮತ್ತು ಭಯಗೊಳ್ಳುವಂತಹ ಪ್ರಸಂಗ ಕಂಡು ಬರುತ್ತಿತ್ತು. ಗ್ರಾಮದಲ್ಲಿಯೇ ವಾಸ್ತವ್ಯ ಹೂಡುವ ಪರಿಸ್ಥಿತಿ ಎದುರಾದರೆ ಊರಿನ ಹೊರವಲಯದಲ್ಲಿರುವ ಆಂಜನೇಯ ಸ್ವಾಮಿಯ ದೇವಾಲಯ ಅಥವಾ ಮಾರಮ್ಮ/ಊರಮ್ಮನ ದೇವಾಲದಲ್ಲಿ ತಂಗುತ್ತಾರೆ. ಭಿಕ್ಷಾಟನೆ ಹೊರಡುವ ಮುನ್ನ ಸುಡುಗಾಡು ಸಿದ್ಧರು ಮುಂಜಾನೆಯೇ ಮೇಲೆದ್ದು, ಸ್ನಾನ ಮಾಡಿ ಮಡಿ ವಸ್ತ್ರಗಳನ್ನು ಧರಿಸಿ; ಅಗಸಿ ಬಾಗಿಲಿನಿಂದ ಊರ ಪ್ರವೇಶಿಸಿ ಮೊದಲು ಹರಳಯ್ಯನ ಮನೆ, ಮಾದಿಗರ ಮನೆಯಿಂದ ಭಿಕ್ಷಾಟನೆಯನ್ನು ಪ್ರಾರಂಭಿಸುತ್ತಾರೆ. ಪ್ರತಿ ಮನೆ ಮನೆಗೂ ಶಂಖ, ಜಾಗಟೆ, ಗಂಟೆಗಳನ್ನು ಬಾರಿಸುತ್ತಾ ಶಿವನಾಮ ಸ್ಮರಣೆಯೊಂದಿಗೆ ಭಿಕ್ಷೆ ಬೇಡಲಾಗುತ್ತದೆ. ಜಯವಾಗಲಿ, ಜಯವಾಗಲಿ, ಗುರುವೇ ನಿನಗೆ ಜಯವಾಗಲಿ ಎಂಬ ನುಡಿ ಹೇಳುತ್ತಾ ಭಿಕ್ಷೆ ಬೇಡುವುದು ಕಂಡು ಬರುತ್ತದೆ. ಇದಲ್ಲದೆ ಭಿಕ್ಷೆ ಬೇಡುವ ಸಂದರ್ಭದಲ್ಲಿ ವಿಶೇಷವಾದ ವಿವಿಧ ಶ್ಲೋಕಗಳನ್ನು ಹೇಳುವುದು ರೂಢಿಯಲ್ಲಿರುವುದನ್ನು ಕಾಣಬಹುದಾಗಿದೆ. ಉದಾಃ

*ಓಂ ಹರಿಕೆಯನು ಮಾಡಯ್ಯ ಹೊರಳುವ ಮಹಾದೇವ*
*ಗುರುವೇ ಗುರುವೇ ಎಂದು ಪರಮ ಪರಿಪೂರ್ಣ*
*ನಿಮ್ಮ ಪಾದದ ಧೂಳು ಪರರಿಗೆ ಸೋಂಕಿದರೆ ಹರಿದು ಹೋಗುವುದು*
*ಸರಿತ ಪರಿಜ್ಞಾನದಲ್ಲಿ ಲಿಂಗದಲ್ಲಿ ಕಾಣುವುದು ಶ್ರೀಗುರು ಚೆನ್ನರಾಯ*
*ಎಂಬಂತೆ ಅವರ ಮನೆ ದೇವರನ್ನು ಹೆಸರು ಹೇಳುತ್ತ ನೆನೆದು ಭಿಕ್ಷೆ ಕೇಳುತ್ತಾರೆ.*

*ಪರಮ ಆರೋಢ ಸಿದ್ಧಪೊರೆಯನ್ನು ಕರುಣದಲ್ಲಿ ಪರಿಹರಿಸು*
*ನಿನ್ನ ಭವಬಾಂಧವ ಚಿರಕಾಲದಲ್ಲಿ ನಿನ್ನ ಸ್ಮರಣೆಯನ್ನು ಮರೆಯದೆ*
*ಮಾಳ್ಪೆ ಪರಮಗುರು ನೀನು ಇಂದು ಶೃತಿ ಸಾರುವುದು ಇಂದು*
*ಅರವುಳ್ಳ ಮಹಾರಾಜ ಸರಿಯೆತ್ತಿ ಧರಿಮೇಲೆ ಬಂದು ನರ ರೂಪಗಳ ರಕ್ಷಿವಯ್ಯ*
*ಪರಮಮುಕ್ತಿಯ ಪುರುಷ ಉರುಳ ಪ್ರಪಂಚವನ್ನರಸಿ ಭವಸರಧಿಯನ್ನು ಮಾಡಿ*
*ಪಾರು ಮಾಡಯ್ಯ ಪರಶಿವನೇ ಶ್ರೀ ಗುರು ವೀರಭದ್ರೇಶ್ವರ*

*ಇವರು ಕೊಟ್ಟ  ದಾನ ಧರ್ಮಗಳಲ್ಲಿ ಪುಣ್ಯ ಚೈತ್ರವಾಗಲಿ ಮಕ್ಕಳು ಮರಿಗಳಲ್ಲಿ*
*ಜಯಕಾರವಾಗಲಿ, ಉದ್ಧಾರವಾಗಲಿ, ಉದುಮತಿಯಾಗಲಿ, ದುಷ್ಟ ಕಂಠಗಳು ದೂರಾಗಲಿ*
*ಅಷ್ಟನವಗ್ರಹಗಳು ಇಂದಾಗಲಿ, ಕಾಟ, ಕರ್ಮಗಳು, ದಂಡ, ದೋಷಗಳು ದೂರು ಮಾಡಯ್ಯ*
*ಪರಶಿವನೇ ಶ್ರೀ ಗುರು ಬೆಂಡವಾಳದ ರೇವಣಸಿದ್ಧೇಶ್ವರ ಇವರ ಮನೆ ಬೆಳಕಾಗಲಿ*
*ಅಕ್ಕ ತಮ್ಮಂದಿರಲ್ಲಿ, ಅಣ್ಣ ತಮ್ಮಂದಿರಲ್ಲಿ ಮಕ್ಕಳು ದೊಡ್ಡವರಾಗಿ*
*ಕಲ್ಯಾಣವಾದೀತು ಎಂಬ ತೊಟ್ಟಿಲುವಾಗಲಿ, ರಾಮ ಭೀಮನಂತ*
*ಜೋಡಿ ಬಸವಕಟ್ಟಿ ಇಡಿಬಿತ್ತಿ ಖಡ್ಗ ಬೆಳೆಯಲಿ*

*ಹಾಲುವೇದ ರುದ್ರವಾಗಲಿ ಗುರುವಿನ ಕೊಂಡಾಡಿ ಮುದ್ದಾಡಿ*
*ತಾನು ಕೂಡ ಶಿವ ಶಿವ ಎಂದೆಂತನು ಶಿವ ಧ್ಯಾನವನ್ನು ಮಾಡುತ್ತಿರುವಿರಯ್ಯ*
*ದಶಮಾಪುರ ಗ್ರಾಮದಲ್ಲಿ.*
*ಹುಬ್ಬಳ್ಳಿ ಸಿದ್ಧಾರೂಢ ಗದುಗಿನ ಚಿದಾನಂದ, ಧಾರವಾಡದ ಮೃತ್ಯುಂಜಯ್ಯ*
*ಕೊಪ್ಪಳದ ಗವಿಸಿದ್ದೇಶ್ವರ, ಹಾನಗಲ್ಲು ಕುಮಾರಸ್ವಾಮಿ, ಹಂಪಿ ಪಂಪಾಪತಿ ದೇವರು*
*ಉಜ್ಜಯಿನಿ ಮರಳುಸಿದ್ದೇಶ್ವರ ಓಂ ನಮಃ ಶಿವಾಯಃ*

*ಅಣ್ಣಿಗೇರಿ ಅಮೃತಲಿಂಗ ಕೀರುಗಾಳದ ಪ್ರಭುಲಿಂಗ ದೇವರು*
*ಜಮಖಂಡಿ ಜಂಬುಲಿಂಗ, ಕುಂದವಾಳದ ಶಂಭುಲಿಂಗ*
*ಆತ್ಮಲಿಂಗ ಅನುಭಾವ ಲಿಂಗ ಏಳುಕೋಟಿ ಮೈಲಾರಲಿಂಗ*
*ಗೋಕರ್ಣ ಲಿಂಗ ತಂಗೋಳಿ ಶಿವಲಿಂಗೇಶ್ವರ ಮುನುವಳ್ಳಿ ಪಂಚಲಿಂಗೇಶ್ವರ*
*ಕಂಪ್ಲಿ ಸೋಮಲಿಂಗೇಶ್ವರ ಹರಿಹರದ ಮಹಾಲಿಂಗೇಶ್ವರ ಇವರ ಮನೆ ಬೆಳಕಾಗಲೀ*

*ಜಯವಾಗಲಿ ಜಯವಾಗಲಿ ಜಯವಾಗಲಿ ಜಯವಾಗಲಿ*
*ತೆಕ್ಕಲಕೋಟಿ ಕಾಡುಸಿದ್ಧ ನೂಕುಮಲೈ ಕರಿಸಿದ್ಧ ಅಮೋಘಸಿದ್ಧ ಗುಪ್ತಸಿದ್ಧ*
*ಹರಿಯಾಣಸಿದ್ಧ ನುಂಕುಮಲೈಯ ಸಿದ್ಧ ಬೆಂಡವಾಳದ ರೇವಣಸಿದ್ಧ ಕರಿಯಸಿದ್ಧ*
*ಹುಬ್ಬಳ್ಳಿ ಸಿದ್ಧಾರೂಡ ಓಂ ನಮಃ ಶಿವಾಯಃ*

*ಜಯ ಜಯವಾಗಲಿ ರೇವಣಸಿದ್ಧ ಸುಡುಗಾಡು ಸಿದ್ಧನಿಗೆ*
*ಅಧಿಪತಿಯಾದ ರೇವಣಸಿದ್ದೇಶ್ವರ ಇವರ ಮನೆ ಬೆಳಕಾಗಿ*
*ಓಂ ನಮಃ ಶಿವಾಯಃ*

*(ವಕ್ತೃ: ಅಂಜಿನಪ್ಪ, ಹೊಸ್ಕೇರಿ, ಸಿದ್ಧರು)*

ಈ ಶ್ಲೋಕಗಳನ್ನು ಹೇಳಿ ಧರ್ಮ ಭಿಕ್ಷೆಯನ್ನು ಕೇಳುತ್ತಾ ಮುನ್ನಡೆಯುತ್ತಾರೆ. ಈ ಶ್ಲೋಕದಲ್ಲಿ ಅದ್ಭುತವಾದ ನಾಮಸ್ಮರಣೆ ಕೇಳಿ ಬರುತ್ತದೆ. ಕೇಳುವವರಲ್ಲಿ ಯಾವುದೋ ಒಂದು ಶಕ್ತಿ ಮನದಲ್ಲಿ ನಿಂತಂತೆ ಭಾಸವಾಗುತ್ತದೆ. ಈ ಸಂಗತಿಗಳು ಕಣ್ಣಾರೆ ನೋಡಿ ಕಿವಿಯಾರೆ ಕೇಳಿದಾಗ ಆಗುವ ಅನುಭವವು ಎಂಥಾ ನಾಸ್ತಿಕನ ಮನಸ್ಸು ಆಸ್ತಿಕನ ಕಡೆಗೆ ವಾಲುವಂತೆ ಚಡಪಡಿಸುತ್ತದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ಗ್ರಾಮದ ಪ್ರತಿಯೊಂದು ಮನೆ ಮನೆಗೂ ಹೋಗಿ ಕಾಳು ಕಡ್ಡಿಗಳನ್ನು ಭಿಕ್ಷೆಯಾಗಿ ಪಡೆಯುತ್ತಾರೆ. ದಾನ ನೀಡಿದವರಿಗೆ, ಪಡೆದವರಿಗೆ ಒಳಿತಾಗುತ್ತದೆ ಎಂಬ ನಂಬಿಕೆ ಇವರಲ್ಲಿದೆ. ನೀಡುವ ದಾನವನ್ನು ಜೋಳಿಗೆಯಲ್ಲಿ ಪಡೆಯುತ್ತಾರೆ. ನಂತರ ದಾನ ಪಡೆದವನು ತನ್ನ ಕೊರಳಲ್ಲಿರುವ ರುದ್ರಾಕ್ಷಿ ಮಾಲೆಯನ್ನು ಹಿಡಿದು ದೇವರನ್ನು ಸ್ಮರಿಸುತ್ತಾ ದಾನ ನೀಡಿದವರಿಗೆ ಒಳಿತಾಗಲೆಂದು ಹರಸಿ ನೀಡಿದ ದಾನದ ಒಂದು ಮುಷ್ಟಿಯನ್ನು ಹಿಂದುರಿಗಿಸಿ ಕೊಡುತ್ತಾರೆ. ಇದರಿಂದ ಇವರ ಮನೆ ವಂಶೋದ್ಧಾರ ಹಸಿರಾಗುತ್ತದೆ ಎಂಬ ನಂಬಿಕೆಯಿದೆ.

ಭಿಕ್ಷಾಟನೆಗೆ ಹೋದ ಸಂದರ್ಭದಲ್ಲಿ ಊರಿನ ಯಾರಾದರೂ ಮರಣ ಹೊಂದಿದರೆ ಅವರ ಅಂತಿಮ ಸಂಸ್ಕಾರದವರೆಗೂ ಅದೇ ಗ್ರಾಮದಲ್ಲಿ ವಾಸ್ತವ್ಯ ಹೂಡುತ್ತಾರೆ. ಕುಣಿ ತೆಗೆದ ಸ್ಮಶಾನದಲ್ಲಿ ಹೆಣ ಎತ್ತಿಕೊಂಡು ಬರುವುದಕ್ಕೂ ಮುಂಚಿತವಾಗಿ ಕುಣಿಯೊಳಗೆ ಸಿದ್ಧರು ಕುಳಿತುಕೊಂಡಿರುತ್ತಾರೆ. ಹೆಣ ಎತ್ತಿಕೊಂಡು ಬಂದ ಮನೆಯವರು ಸುಡುಗಾಡು ಸಿದ್ಧರಿಗೆ ಕಾಣಿಕೆಯನ್ನು ನೀಡಿದ ನಂತರವೇ ಕುಣಿಯಿಂದ ಹೊರಬರುತ್ತಾರೆ. ಒಂದು ವೇಳೆ ಸತ್ತ ಮನೆಯವರು ಸಿದ್ದಯ್ಯರಿಗೆ ಕಾಣಿಕೆ ನಿರಾಕರಿಸಿದರೆ ಮಾದಿಗ ಸಮುದಾಯದ ಕುಣಿ ತೆಗೆದವರು ಇವರ ಮೂಲಕ ಕಾಣಿಕೆಯನ್ನು ಪಡೆಯುತ್ತಾರೆ. ಗುದ್ದಿನೊಳಗಡೆ ನಾಲ್ಕು ಮೂಲೆಗಳಿಗೂ ತಾಮ್ರದ ತಗಡುಗಳಿಂದ ಶಿವನಾಮವನ್ನು ಬರೆದು, ಮೂಲೆಗಳಲ್ಲಿಟ್ಟು, ವಿಭೂತಿ ಗಟ್ಟಿಗಳನ್ನಿಟ್ಟು ಒಂದೆರಡು ನಿಮಿಷಗಳ ಕಾಲ ಶಿವಸ್ಮರಣೆಯನ್ನು ಮಾಡಿ ಅಲ್ಲಿಂದ ಮೇಲೆ ಬರುತ್ತಾರೆ. ನಂತರ ಸಿದ್ಧರು ಕಾಣಿಕೆ ಪಡೆದು, ಕಹಳೆ ಊದಿ ಅಲ್ಲಿಂದ ನಡೆಯುತ್ತಾರೆ.

ಹೀಗೆ ಭಿಕ್ಷಾಟನೆ ಮುಗಿದ ನಂತರ ಮತ್ತೆ ತಮ್ಮ ಊರಿನ ಕಡೆಗೆ ಮುಖ ಮಾಡುತ್ತಾರೆ. ಒಂದು ಕಡೆ ಕುಳಿತು 15 ದಿನಗಳಿಂದ ಬೇಡಿದಂತಹ ಎಲ್ಲಾ ದವಸ ಧಾನ್ಯ ಮತ್ತು ಹಣವನ್ನು ಸಮನಾಗಿ ಹಂಚಿಕೊಳ್ಳುತ್ತಾರೆ. ಸಾಮಾನ್ಯವಾಗಿ 15 ದಿವಸಗಳ ಕಾಲ ಭಿಕ್ಷೆ ಬೇಡಿದರೆ ಪ್ರತಿಯೊಬ್ಬರಿಗೂ 10 ರಿಂದ 15 ಕೆ.ಜಿ. ಧಾನ್ಯಗಳು ಮತ್ತು ಒಬ್ಬೊಬ್ಬರಿಗೆ 5 ರಿಂದ 6 ಸಾವಿರ ರೂಪಾಯಿ ಹಣ ಸಿಗುತ್ತದೆ. ಹಿಂದಿನ ಕಾಲದ ಭಿಕ್ಷಾಟನೆಯಲ್ಲಿ ಧಾನ್ಯಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಇರುತ್ತಿತ್ತು. ಕೊಡುತ್ತಿದ್ದರು. ಆದರೆ ವಾಸ್ತವದಲ್ಲಿ ಧಾನ್ಯಗಳನ್ನು ಪಡೆಯದೇ ಹಣವನ್ನು ಬೇಡುವಂತಹದ್ದು ಕಂಡು ಬರುತ್ತದೆ.

ಈ ಸಮುದಾಯದಲ್ಲಿ ಹಿರಿಯ ಜೀವಿಗಳೇ ಹೆಚ್ಚಾಗಿ ಭಿಕ್ಷಾಟನೆಗೆ ಮುಂದಾಗಿದ್ದಾರೆ. ಇವತ್ತಿನ ಯುವ ಪೀಳಿಗೆ ಇಂತಹ ಸಂಗತಿಗಳಿಂದ ದೂರ ಸರಿಯುತ್ತಿರುವುದು ನೋಡಬಹುದು. ಯುವ ಪೀಳಿಗೆ ಭಿಕ್ಷಾಟನೆ ಕೀಳರಿಮೆ ಎಂಬ ಭಾವನೆಯಿಂದ ವಿವಿಧ ಕಸುಬುಗಳಿಗೆ ಒಗ್ಗೂಡಿ ದುಡಿಯುತ್ತಿರುವುದು ನೋಡಬಹುದು. ಭಿಕ್ಷಾಟನೆ ಹಿಂದಿಗಿಂತಲೂ ಇವತ್ತಿನ ವಾಸ್ತವದಲ್ಲಿ ಹೆಚ್ಚಾಗಿ ಹಣ ಮತ್ತು ಧಾನ್ಯಗಳ ಸಂಗ್ರಹಣೆ ಧರ್ಮ ಭಿಕ್ಷಾಟನೆಯಿಂದ ಕಂಡು ಬರುತ್ತದೆ ಎಂಬುದು ಕೂಡ ತಿಳಿದುಬರುತ್ತಲಿದೆ. ಆದರೂ ಕೆಲವೇ ವರ್ಷಗಳಲ್ಲಿ ಸಂಪೂರ್ಣವಾಗಿ ಇವರು ಬೇಡಿ ತಿನ್ನುವ ಇಂತಹ ವ್ಯವಸ್ಥೆಯು ಬದಲಾವಣೆ ಆಗುವುದರಲ್ಲಿ ಯಾವುದೇ ಸಂಶಯವಿಲ್ಲ. ಹಿಂದೆ ಕಾಯಕವೇ ಮೂಲವಾಗಿ ಧರ್ಮ ಭಿಕ್ಷಾಟನೆಗೆ ತೆರಳುತ್ತಿದ್ದರು. ಇವತ್ತಿನ ವಾಸ್ತವದಲ್ಲಿ ದುಡಿಮೆ ಎಂಬಂತೆ ಮತ್ತೊಂದು ಮುಖವಾಗಿ ಈ ಮಾರ್ಗವನ್ನು ತುಳಿದಿರುವುದು ಕಂಡು ಬರುತ್ತದೆ.

**ಉಪಸಂಹಾರ**

ಮೇಲಿನ ಅಂಶಗಳನ್ನು ಗಮನಿಸಿದಾಗ ಧರ್ಮ ಭಿಕ್ಷಾಟನೆ ಎಂಬುದು ಬದುಕಿಗಾಗಿ ದೈವದ ಮೂಲಕ ಸೃಷ್ಟಿಕೊಂಡ ಕಾಯಕವಾಗಿದೆ. ಆದರೆ ಸುಡುಗಾಡು ಸಿದ್ಧರ ಹೊಸ ತಲೆಮಾರಿನ ಯುವಕರು ಧರ್ಮ ಭಿಕ್ಷಾಟನೆ ವೃತ್ತಿಯಿಂದ ವಿಮುಖರಾಗುತ್ತಿದ್ದಾರೆ. ಬಿಕ್ಷಾಟನೆ ಮಾಡುವುದು ಅಗೌರವ ಎಂದು ಭಾವಿಸಿರುವುದರಿಂದ ಹಿರಿಯರು ಮಾತ್ರ ಈ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ. . ವಾಸ್ತವದಲ್ಲಿ ನುಡಿ ಹೇಳುವರು ಬಹಳ ಅಲ್ಪಸಂಖ್ಯೆಯಲ್ಲಿ ಇದ್ದಾರೆ. ಮುಂದಿನ ದಿನಗಳಲ್ಲಿ ಇಂತಹ ಸಂಗತಿಗಳು ಸಂಪೂರ್ಣವಾಗಿ ಕಣ್ಮರೆಯಾಗುವುದರಲ್ಲಿ ಮತ್ತೊಂದು ಮಾತಿಲ್ಲ. ಹಾಗಾಗಿ ಸರ್ಕಾರಗಳು ಇಂತಹ

ಸಮುದಾಯಗಳು ಮತ್ತು ಈ ಸುಡುಗಾಡು ಸಿದ್ಧರ ಮೌಖಿಕ ಜ್ಞಾನಕ್ಕೆ ವಿಶೇಷವಾದ ಮೆರಗು ನೀಡಬೇಕಾಗಿದೆ. ಸಮುದಾಯಗಳ ಮೂಲವನ್ನು ಪ್ರತಿಬಿಂಬಿಸುವಂತಹ ಇಂತಹ ವಕ್ತೃಗಳು ಕಣ್ಮರೆಯಾದರೆ ಸಮುದಾಯದ ಮೂಲ ಗೌಪ್ಯವಾಗಿ ಉಳಿಯುತ್ತದೆ ವಿನಃ ಜನಸಾಮಾನ್ಯರ ನಡುವೆ ತಲೆ ಎತ್ತಿ ನಿಲ್ಲಲು ಸಾಧ್ಯವಾಗುವುದಿಲ್ಲ ಎಂಬುದಾಗಿ ಹೇಳಬಹುದು.

**ಪರಾಮರ್ಶ ಗ್ರಂಥಗಳು**


- ದೇವಋುಷಿ, ವೈ.ಎಂ. (2019). ಸುಡುಗಾಡು ಸಿದ್ಧರು. ಕನ್ನಡ ಸಾಹಿತ್ಯ ಅಕಾಡಮಿ, ಬೆಂಗಳೂರು.
- ಮುರಿಗೆಪ್ಪ (2011). ದಕ್ಷಿಣ ಭಾರತೀಯ ಜನಪದ ಕೋಶ. ಸಂ–1, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಮೇತ್ರಿ.ಕೆ.ಎಂ. (2021). ಮರುಗು ಭಾಷೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ರಮೇಶ್ ಸ.ಚಿ. (2005). ಅಲೆಮಾರಿಗಳ ಸ್ಥಿತಿಗತಿ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ರಹಮತ್ ತರಿಕೆರೆ. (2013). ಕರ್ನಾಟಕ ನಾಥಪಂಥ, ಅಭಿನವ ಪ್ರಕಾಶನ, ಬೆಂಗಳೂರು.
- ಹಳ್ಳಿಕೆರೆ, ಎಫ್.ಟಿ.(2014). ರೇವಣಸಿದ್ಧ ಪರಂಪರೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.


**ಅನುಬಂಧ 1: ಛಾಯಾಚಿತ್ರಗಳು**



ಧರ್ಮ ಭಿಕ್ಷಾಟನೆಯಲ್ಲಿ ತೊಡಗಿರುವ ಸುಡುಗಾಡು ಸಿದ್ಧರು



ಧರ್ಮ ಭಿಕ್ಷಾಟನೆಯಲ್ಲಿ ತೊಡಗಿರುವ ಸುಡುಗಾಡು ಸಿದ್ಧರೊಂದಿಗೆ ಸಂಶೋಧಕರು